# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 1202
**ಸದಸ್ಯರ ಹೆಸರು** : ಶ್ರೀ ತಿಪ್ಪಣ್ಣಪ್ಪ ಕಮಕನೂರು (ವಿಧಾನಸಭಾ ಕ್ಷೇತ್ರ)
**ಉತ್ತರಿಸುವವರು** : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು.
**ಉತ್ತರಿಸಬೇಕಾದ ದಿನಾಂಕ** : 13.03.2026.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ "ಗೃಹಲಕ್ಷ್ಮಿ" ಯೋಜನೆಯಡಿ ನೋಂದಣಿಯಾಗಿರುವ ಫಲಾನುಭವಿಗಳ ಪೈಕಿ ಮೃತರ ಹೆಸರಿನಲ್ಲೂ ಹಣ ಜಮೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ರಾಜ್ಯಾದ್ಯಂತ ಅಂದಾಜು ಎಷ್ಟು ಪ್ರಕರಣಗಳು ಪತ್ತೆಯಾಗಿವೆ; (ಜಿಲ್ಲಾವಾರು ಮಾಹಿತಿ ನೀಡುವುದು); | ಬಂದಿದೆ.<br><br>ಗೃಹಲಕ್ಷ್ಮಿ ಯೋಜನೆಯಡಿ ನೋಂದಣಿಯಾದ ಫಲಾನುಭವಿಗಳ ಪೈಕಿ ಪ್ರಾರಂಭದಿಂದ ಇಲ್ಲಿಯವರೆಗೆ 2,47,554 ಫಲಾನುಭವಿಗಳು ಮರಣ ಹೊಂದಿದ್ದು, ಇವರಲ್ಲಿ 1,06,922 ಫಲಾನುಭವಿಗಳಿಗೆ ಮರಣದ ನಂತರವೂ ಧನಸಹಾಯ ಪಾವತಿಯಾಗಿರುತ್ತದೆ. ಜಿಲ್ಲಾವಾರು ವಿವರವನ್ನು **ಅನುಬಂಧ**ದಲ್ಲಿ ಒದಗಿಸಿದೆ. |
| ಆ) | ಪತ್ರಿಕಾ ವರದಿಗಳ ಪ್ರಕಾರ ರಾಜ್ಯದಲ್ಲಿ ಸುಮಾರು 2 ಲಕ್ಷಕ್ಕೂ ಹೆಚ್ಚು ಮೃತ ಫಲಾನುಭವಿಗಳ ಹೆಸರಿನಲ್ಲಿ ಹಣ ದುರ್ಬಳಕೆಯಾಗುತ್ತಿರುವುದು ನಿಜವೇ; ಈ ಬಗ್ಗೆ ಸರ್ಕಾರ ಕೈಗೊಂಡಿರುವ ತನಿಖೆ ಅಥವಾ ಆಡಿಟ್ ವರದಿಯ ಹಂತಗಳೇನು; | • ಗೃಹಲಕ್ಷ್ಮಿ ಯೋಜನೆಯಡಿ ಡಿಸೆಂಬರ್-2025ರ ಅಂತ್ಯಕ್ಕೆ 1.29 ಕೋಟಿ ಫಲಾನುಭವಿಗಳು ನೋಂದಣಿಯಾಗಿದ್ದು, ಈ ಪೈಕಿ 1,06,922 ಫಲಾನುಭವಿಗಳಿಗೆ ಮರಣದ ನಂತರವೂ ಮೃತರ ಖಾತೆಗೆ ಧನಸಹಾಯ ಜಮೆಯಾಗಿದ್ದು, ಸದರಿ ಧನಸಹಾಯವನ್ನು ಮೃತ ಫಲಾನುಭವಿಗಳು ಖಾತೆ ಹೊಂದಿರುವ ಬ್ಯಾಂಕ್‌ಗಳಿಂದ ವಾಪಸ್ ಪಡೆದು ಸರ್ಕಾರದ ಲೆಕ್ಕಶೀರ್ಷಿಕೆಗೆ ಜಮೆ ಮಾಡುವಂತೆ ರಾಜ್ಯಮಟ್ಟದ ಬ್ಯಾಂಕರುಗಳ ಸಮಿತಿ (State Level Bankers Committee) ಮೂಲಕ ಎಲ್ಲಾ ಬ್ಯಾಂಕ್‌ಗಳಿಗೆ ನಿರ್ದೇಶನ ನೀಡಲಾಗಿರುತ್ತದೆ. ಇದಕ್ಕಾಗಿ SOP ಸಹ ನೀಡಲಾಗಿರುತ್ತದೆ.<br><br>• ಮೃತ ಫಲಾನುಭವಿಗಳ ವಾರಸುದಾರರು ಮರಣ ಪ್ರಮಾಣ ಪತ್ರ ಪಡೆದ ನಂತರದಲ್ಲಿ ಮಾಹಿತಿಯು ಇ-ಜನ್ಮ ಪೋರ್ಟಲ್‌ನಲ್ಲಿ ದಾಖಲಾಗುತ್ತದೆ.<br><br>• ಪ್ರಸ್ತುತ, ಮರಣ ಹೊಂದಿದ ಫಲಾನುಭವಿಗಳ ಮಾಹಿತಿಯನ್ನು ಪ್ರತಿ 15 ದಿನಗಳಿಗೊಮ್ಮೆ ಇ-ಆಡಳಿತ ಕೇಂದ್ರದ ಕುಟುಂಬ ಪೋರ್ಟಲ್, ಇ-ಜನ್ಮ ಪೋರ್ಟಲ್‌ನಿಂದ ಮಾಹಿತಿ ಪಡೆದು EDCSನೊಂದಿಗೆ Broadcast ಮಾಡಲಾಗುತ್ತಿದೆ. ತದನಂತರ ಗೃಹಲಕ್ಷ್ಮಿ ಯೋಜನೆಯಡಿ ಪ್ರತಿ ಕಂತಿನ ಪಾವತಿಗೂ ಮುನ್ನ ಮರಣ ಹೊಂದಿದ ಫಲಾನುಭವಿಯ ಮಾಹಿತಿಯನ್ನು ಇ-ಜನ್ಮ ಪೋರ್ಟಲ್‌ನಲ್ಲಿನ ಮಾಹಿತಿಯನುಸಾರ ಇಂದೀಕರಿಸಿ, ನಂತರದಲ್ಲಿ ಧನಸಹಾಯ ಪಾವತಿಸಲು ಕ್ರಮವಹಿಸಲಾಗುತ್ತದೆ. |

**ಸಂಖ್ಯೆ: ಮಮಇ 61 ಮಮಅ 2026**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಸಚಿವರು

ಅನುಬಂಧ

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1128(1202)

ಗೃಹಲಕ್ಷ್ಮಿ ಫಲಾನುಭವಿಗಳ ಮರಣ ನಂತರ ಜಮೆಯಾದ ಧನಸಹಾಯದ ವಿವರ (ನವೆಂಬರ್-2025 ರ ಅಂತ್ಯಕ್ಕೆ)

| ಕ್ರ. ಸಂ. | ಜಿಲ್ಲೆಗಳು | ಯೋಜನೆಯಡಿ ನೋಂದಣಿಯಾಗಿ ಮರಣ ಹೊಂದಿದ ಫಲಾನುಭವಿಗಳ ಸಂಖ್ಯೆ | ಮರಣ ಹೊಂದಿದ ನಂತರ ಧನಸಹಾಯ ಪಾವತಿಸಲಾಗಿರುವ ಫಲಾನುಭವಿಗಳ ಸಂಖ್ಯೆ | ಫಲಾನುಭವಿಯ ಮರಣದ ನಂತರ ಪಾವತಿಯಾದ ಒಟ್ಟು ಕಂತುಗಳು |
|---|---|---|---|---|
| 1 | ಬಾಗಲಕೋಟೆ | 8139 | 3543 | 19485 |
| 2 | ಬಳ್ಳಾರಿ | 5115 | 2186 | 11257 |
| 3 | ಬೆಳಗಾವಿ | 19345 | 8549 | 47427 |
| 4 | ಬೆಂಗಳೂರು (ಗ್ರಾ) | 4613 | 1921 | 10651 |
| 5 | ಬೆಂಗಳೂರು (ನ) | 14416 | 6146 | 34982 |
| 6 | ಬೀದರ | 5268 | 2559 | 15104 |
| 7 | ಚಾಮರಾಜನಗರ | 5913 | 2768 | 14825 |
| 8 | ಚಿಕ್ಕಬಳ್ಳಾಪುರ | 6414 | 2788 | 14979 |
| 9 | ಚಿಕ್ಕಮಗಳೂರು | 6261 | 2488 | 12362 |
| 10 | ಚಿತ್ರದುರ್ಗ | 8636 | 3812 | 20404 |
| 11 | ದಕ್ಷಿಣ ಕನ್ನಡ | 9696 | 3446 | 16635 |
| 12 | ದಾವಣಗೆರೆ | 8100 | 3424 | 18108 |
| 13 | ಧಾರವಾಡ | 7061 | 3171 | 17143 |
| 14 | ಗದಗ | 4895 | 2167 | 11834 |
| 15 | ಹಾಸನ | 10276 | 4333 | 23142 |
| 16 | ಹಾವೇರಿ | 7909 | 3659 | 19885 |
| 17 | ಕಲಬುರಗಿ | 7862 | 3717 | 21001 |
| 18 | ಕೊಡಗು | 2313 | 852 | 4366 |
| 19 | ಕೋಲಾರ | 7180 | 3013 | 16633 |
| 20 | ಕೊಪ್ಪಳ | 6047 | 2612 | 13484 |
| 21 | ಮಂಡ್ಯ | 11089 | 4927 | 25661 |
| 22 | ಮೈಸೂರು | 13437 | 5851 | 31773 |
| 23 | ರಾಯಚೂರು | 6779 | 3125 | 16631 |
| 24 | ಬೆಂಗಳೂರು ದಕ್ಷಿಣ | 6773 | 3120 | 16419 |
| 25 | ಶಿವಮೊಗ್ಗ | 7971 | 3543 | 18768 |
| 26 | ತುಮಕೂರು | 16016 | 6914 | 36578 |
| 27 | ಉಡುಪಿ | 6679 | 2406 | 10852 |
| 28 | ಉತ್ತರ ಕನ್ನಡ | 6857 | 2690 | 12814 |
| 29 | ವಿಜಯನಗರ | 5663 | 2415 | 12057 |
| 30 | ವಿಜಯಪುರ | 6748 | 3015 | 17679 |
| 31 | ಯಾದಗಿರಿ | 4083 | 1762 | 9718 |
| | **ಒಟ್ಟು** | **2,47,554** | **1,06,922** | **5,72,657** |